**ಸಾಕ್ಷಿಯನ್ನು ದಿಃ 29.04.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ**

1. ನಾನು ವ್ಯವಸಾಯ ಮಾಡುತ್ತೇನೆ. ನಾನು ವಿದ್ಯಾಭ್ಯಾಸ ಮಾಡಿಲ್ಲ.

2. ನಾನು ವಾಸವಿರುವುದು ಲಿಂಗಾಪುರ ಗ್ರಾಮದಲ್ಲಿ. ನನಗೆ ಲಿಂಗಾಪುರ ಗ್ರಾಮದ ಸ.ನಂ.1/1 ರಲ್ಲಿ 3 ಎಕರೆ 10 ಗುಂಟೆ ಜಮೀನು ಇದೆ.

3. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಯಾವಾಗ ತಯಾರು ಮಾಡಿದರು ಎಂದು ನನಗೆ ಈಗ ನೆನಪಿಲ್ಲ. ನೀವು ಅನಕ್ಷರಸ್ಥರಾದ ಕಾರಣ ಅದರಲ್ಲಿ ಬರೆದ ವಿಚಾರಗಳ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ, ವಕೀಲರು ಓದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಅದನ್ನು ನಾನು ಹೇಳಿದಂತೆ ಬರೆದಿರುತ್ತಾರೆ.

4. ಸಾಕ್ಷಿ ಹೇಳಲು ನನಗೆ ಪುಟ್ಟರಾಜಪ್ಪನವರ ಮಗ ಚಂದ್ರಶೇಖರ ರವರು ಕೇಳಿರುತ್ತಾರೆ.

5. ಈ ದಾವೆಯನ್ನು ನಿರ್ಮಲಾ ರವರು ಕರಿಯಪ್ಪ ಮತ್ತು ಅವರ ಮಗನ ಮೇಲೆ ದಾವೆ ಹಾಕಿರುತ್ತಾರೆ.

6. ದಾವಾ ಜಮೀನಿನ ಬಗ್ಗೆ ನಾನು ಕ್ರಯಪತ್ರವನ್ನು ನೋಡಿದ್ದೇನೆ. 20 ವರ್ಷದ ಹಿಂದೆ ಕ್ರಯಪತ್ರ ಮಾಡಿರುತ್ತಾರೆ, ದಿನಾಂಕ ನನಗೆ ನೆನಪಿಲ್ಲ.

7. ಕ್ರಯಪತ್ರವನ್ನು ನಂಜುಂಡಪ್ಪನವರು ಪುಟ್ಟರಾಜಪ್ಪನವರಿಗೆ ಬರೆದುಕೊಟ್ಟಿರುತ್ತಾರೆ. ಒಂದೂ ಮುಕ್ಕಾಲು ಎಕರೆಗೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ.

8. ದಾವಾ ಜಮೀನು ಒಂದೂ ಮುಕ್ಕಾಲು ಎಕರೆ ಇರಬಹುದು, ನನಗೆ ಸರಿಯಾಗಿ ನೆನಪಿಲ್ಲ.

9. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಚಕ್ಕುಬಂದಿಯನ್ನು ಯಾವ ದಾಖಲೆ ಆಧಾರದ ಮೇಲೆ ಬರೆಸಿದ್ದೀರಾ ಎಂದರೆ, ಜಮೀನು ನೋಡಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ.

10. ನೀವು ಆಗಾಗ ನ್ಯಾಯಾಲಯಕ್ಕೆ ಬರುತ್ತೀರಾ ಎಂದರೆ, ಪುಟ್ಟರಾಜಪ್ಪನವರ ಕೇಸಿಗೆ ಮಾತ್ರ ಬಂದಿರುತ್ತೇನೆ ಎಂದು ನುಡಿಯುತ್ತಾರೆ.

11. ನೀವು ಹಾಗೂ ಚಂದ್ರಶೇಖರ ಚೆನ್ನಾಗಿದ್ದೀರಾ ಎಂದರೆ, ಅವರು ನನ್ನ ಸ್ನೇಹಿತರು.

12. ಈ ದಾವೆಯನ್ನು ಜಮೀನು ತಮ್ಮದೆಂದು ಕೋರಿ ಹಾಕಿರುತ್ತಾರೆ.

13. ದಾವಾ ಜಮೀನಿನ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಚಂದ್ರಶೇಖರ ರವರ ಮಾತು ಕೇಳಿ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

14. ಕರಿಯಪ್ಪನವರಿಗೆ ತೊಂದರೆಯಾಗಲಿ ಹಾಗೂ ವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ